ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,
ಶ್ರೀರಂಗಪಟ್ಟಣ. PW-2

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿನಾಂಕ 07.03.2025

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ಹರೀಶ್ ರವರು ನನಗೆ 7-8 ವರ್ಷಗಳಿಂದ ಪರಿಚಯ ಇರುತ್ತಾರೆ. ವಾಸುರವರು ಸಹಾ ನನಗೆ 7-8 ವರ್ಷಗಳಿಂದ ಪರಿಚಯ ಇರುತ್ತಾರೆ. ವಾಸುರವರು ಬೆಳಗೋಳ ಗ್ರಾಮದಲ್ಲಿ ರಾಮಮಂದಿರ ಬೀದಿಯಲ್ಲಿ ವಾಸವಾಗಿರುತ್ತಾರೆ. ವಾಸುರವರ ತಂದೆಯ ಹೆಸರು ನನಗೆ ಗೊತ್ತಿರುವುದಿಲ್ಲ. ವಾಸುರವರಿಗೆ ಈಗ 48 ವರ್ಷ ವಯಸ್ಸಾಗಿರಬಹುದು. ವಾಸುರವರಿಗೆ ಜಮೀನು ಇರುತ್ತದೆ. ಅದರ ಬಗ್ಗೆ ದಾಖಲೆಗಳನ್ನು ನೋಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಮ್ಮ ಗದ್ದೆಯ ಪಕ್ಕ ವಾಸುರವರ ಗದ್ದೆ ಇರುತ್ತದೆ ಎಂದು ನುಡಿಯುತ್ತಾರೆ.

ಪ್ರನೋಟನ್ನು ವಿಶ್ವನಾಥ್ ಎಂಬುವವರು ಬರೆದಿರುತ್ತಾರೆ. ಪ್ರನೋಟನ್ನು ಹುಲಿಕೆರೆಯಲ್ಲಿರುವ ವಿಶ್ವನಾಥ್ ರವರ ಕಚೇರಿಯಲ್ಲಿ ಬರೆದಿರುತ್ತಾರೆ. ವಾದಿ ಎಲ್ಲಿ ವರೆಗೆ ಓದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪ್ರನೋಟನ್ನು ಬರೆದಾಗ ಸಮಯ ಎಷ್ಟು ಗಂಟೆ ಆಗಿತ್ತು ಎನ್ನುವ ಪ್ರಶ್ನೆಗೆ ಸಾಕ್ಷಿಯು ಸಂಜೆ 7.30 ಆಗಿತ್ತು ಎಂದು ನುಡಿಯುತ್ತಾರೆ. ಪ್ರನೋಟ್ ನಲ್ಲಿ ನನ್ನ ಹೆಸರು ಮತ್ತು ವಿಳಾಸವನ್ನು ನಾನೇ ಬರೆದಿರುತ್ತೇನೆ. ಹಣ ನೀಡಿದಾಗ ಸಮಯ ಎಷ್ಟು ಗಂಟೆ ಆಗಿತ್ತು ಎನ್ನುವ ಪ್ರಶ್ನೆಗೆ ಸಾಕ್ಷಿಯು ರಾತ್ರಿ 8.00 ಆಗಿತ್ತು ಎಂದು ನುಡಿಯುತ್ತಾರೆ. ಬೆಳಗೋಳದಿಂದ ಹುಲಿಕೆರೆ ಗ್ರಾಮಕ್ಕೆ ಸುಮಾರು 2.00 ಕಿ.ಮಿ ಅಂತ ಇರುತ್ತದೆ.

ಹುಲಿಕೆರೆಗೆ ಬನ್ನಿ ಎಂದು ನಿಮ್ಮನ್ನು ಯಾರು ಕರೆದಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹರೀಶ್ ರವರು ಕರೆದಿರುತ್ತಾರೆ ಎಂದು ನುಡಿಯುತ್ತಾರೆ. ಆ ದಿನ ಹರೀಶ್ ರವರು ವಾಸುರವರಿಗೆ ಯಾವುದೇ ಹಣ ನೀಡಿಲ್ಲ ಎಂದರೆ ಸರಿಯಲ್ಲ. ನಾನು ವಾದಿಯ ಜೊತೆ ಸೇರಿ ಶರೀಕಾಗಿ ಪ್ರನೋಟನ್ನು ಸುಳ್ಳಾಗಿ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.

ವಾದಿಯು ವಿಶ್ವನಾಥ್ ರವರ ಕಚೇರಿಗೆ ಬಂದಾಗ ಸಮಯ ಸಂಜೆ 6.45 ರಿಂದ 7.00 ಗಂಟೆ ಆಗಿತ್ತು . ನಾನು ಅಲ್ಲಿಗೆ ಬಂದಾಗ ಸಮಯ ಸಂಜೆ 7.00 ಗಂಟೆ ಆಗಿತ್ತು. ಅಲ್ಲಿ ಯಾರು ಯಾರು ಇದ್ದರು ಎನ್ನುವ ಪ್ರಶ್ನೆಗೆ ಸಾಕ್ಷಿಯು ನಾನು, ವಾಸು ಮತ್ತು ಹರೀಶ್ ರವರು ಇದ್ದೆವು ಎಂದು ನುಡಿಯುತ್ತಾರೆ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರದಿದ್ದರೂ ಸಹಾ ಹರೀಶ್ ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಸಾ.ಓ.ಹೇ.ಸ.ಒ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ., ಶ್ರೀರಂಗಪಟ್ಟಣ.**